
# 02. ಲಂಡನ್ ನಗರ

**– ವಿ.ಕೃ.ಗೋಕಾಕ್**

## ಕವಿ – ಕಾವ್ಯ ಪರಿಚಯ



**ವಿ.ಕೃ.ಗೋಕಾಕ್**

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ ಇವರು **ಕ್ರಿ.ಶ. 1909**ರಲ್ಲಿ ಹಾವೇರಿ ಜಿಲ್ಲೆಯ **ಸವಣೂರು** ಎಂಬ ಊರಿನಲ್ಲಿ ಜನಿಸಿದ್ದಾರೆ. ಇವರು **ಸಮುದ್ರದಾಚೆಯಿಂದ, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ** ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ 'ದ್ಯಾವಾ ಪೃಥಿವೀ' ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ',** ಸಮಗ್ರ ಸಾಹಿತ್ಯಕ್ಕಾಗಿ **'ಜ್ಞಾನಪೀಠ ಪ್ರಶಸ್ತಿ'** ಬಂದಿವೆ. ಭಾರತ ಸರ್ಕಾರ **'ಪದ್ಮಶ್ರೀ ಪುರಸ್ಕಾರ'** ನೀಡಿ ಗೌರವಿಸಿದೆ.

## ಪಾಠದ ಆಶಯ ಭಾವ

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸಕಥನವೂ ಒಂದು. **"ದೇಶ ನೋಡು ಕೋಶ ಓದು"** ಎಂಬ ಮಾತಿದೆ. ಪ್ರವಾಸದ ಸಮಯದಲ್ಲಿ ಕೇಳಿದ, ನೋಡಿದ, ಅನುಭವಿಸಿದ ಅಂಶಗಳನ್ನು ಸುಂದರವಾಗಿ ದಾಖಲಿಸುವುದೊಂದು ಕಲೆ. ಸಾಂಸ್ಕೃತಿಕವಾಗಿ ಶ್ರೀಮಂತನಾಗಿರುವ ವ್ಯಕ್ತಿ ಎಲ್ಲಿದ್ದರೂ ಸಾಂಸ್ಕೃತಿಕ ರಾಯಭಾರಿಯಂತೆ ನಡೆದುಕೊಳ್ಳುತ್ತಾನೆ. ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ. ವೈವಿಧ್ಯಮಯ ಜೀವನದ ದರ್ಶನವಾಗುತ್ತದೆ. ಶಿಕ್ಷಣದ ಒಂದು ಭಾಗವಾಗಿ ಜ್ಞಾನ ವಿಸ್ತರಣೆಗೆ ಮಾರ್ಗದರ್ಶನವಾಗುತ್ತದೆ.

ವಿದೇಶಗಳಲ್ಲಿ ಸಾಹಿತಿಗಳನ್ನು, ವಿವಿಧ ಕ್ಷೇತ್ರದ ಸಾಧಕರನ್ನು ಹೇಗೆ ಸ್ಮಾರಕವಾಗಿ ಸ್ಮರಣೀಯವಾಗಿ ಉಳಿಸಿಕೊಂಡಿದ್ದಾರೆ ಎಂಬುದನ್ನು ಅರಿಯುವ ಆಶಯಭಾವವನ್ನು ವ್ಯಕ್ತಪಡಿಸಿದ್ದಾರೆ. ಇಂಗ್ಲೆಂಡ್ ದೇಶದಲ್ಲಿರುವ ಲಂಡನ್ ನಗರದ ಸೌಂದರ್ಯ ಮತ್ತು ಅಲ್ಲಿಯ ಜನರ ಜೀವನಶೈಲಿ, ಪ್ರಾರ್ಥನಾ ಮಂದಿರ ಮತ್ತು ಮಹಾಪುರುಷರ ಸ್ಮಾರಕವಾದ ವೆಸ್ಟ್‌ಮಿನ್‌ಸ್ಟರ್ ಅಬೆಯ ಒಳಗಿರುವ ಇತಿಹಾಸದ ವಿಷಯವನ್ನು ಈ ಲೇಖನದಲ್ಲಿ ಸುಂದರವಾಗಿ ಪರಿಚಯಿಸಿದ್ದಾರೆ.

## ಲಂಡನ್ ನಗರ ಪಾಠದ ಸಂಕ್ಷಿಪ್ತ ಪರಿಚಯ

ವಿ.ಕೃ. ಗೋಕಾಕ್ ರವರು ಕ್ರಿ.ಶ. 1936 ರಲ್ಲಿ ಇಂಗ್ಲೆಂಡ್ ದೇಶಕ್ಕೆ ಪ್ರವಾಸ ಹೋಗಿದ್ದರು. ಅಲ್ಲಿಯ ಲಂಡನ ನಗರಕ್ಕೆ ಭೇಟಿ ನೀಡಿದ್ದರು. ಆ ನಗರದಲ್ಲಿ ಸುತ್ತಾಡಿ ತಾವು ಕಂಡ ಪ್ರವಾಸದ ಅನುಭವಗಳನ್ನು ತಮ್ಮ **'ಸಮುದ್ರದಾಚೆಯಿಂದ'** ಎಂಬ ಕೃತಿಯಲ್ಲಿ ವಿವರಣೆ ನೀಡಿದ್ದಾರೆ.

ಇಂಗ್ಲೆಂಡ್ ದೇಶದಲ್ಲಿರುವ ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿಯ ರಸ್ತೆಗಳಲ್ಲಿ ವ್ಯಾಪಾರವು ತುಂಬಿರುತ್ತದೆ. ಇದರಿಂದ ಟ್ರಾಮ್ ಬಸ್ಸುಗಳಿಗೆ ಸಕಾಲಕ್ಕೆ ಹೋಗುವುದು ಆಗುವುದಿಲ್ಲ, ಟ್ರಾಫಿಕ್ ಜಾಮ್ ಆಗುತ್ತದೆ. ಬಹಳ ಹೊತ್ತು ನಡುನಡುವೆ ನಿಲ್ಲಬೇಕಾಗುತ್ತದೆ. ಆದ್ದರಿಂದ **ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ (ಭೂಮಿಯ ಅಂತರಾಳದಲ್ಲಿ – ಅಂಡರ್ ಗ್ರೌಂಡ್‌ನಲ್ಲಿ) ಓಡಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ.** ಹಳಿ, ಇಲೆಕ್ಟ್ರಿಕ್‌ಗಾಡಿ, ನಿಲ್ಮನೆ (ನಿಲ್ದಾಣ) ಎಲ್ಲ ಅಂಡರ್ ಗ್ರೌಂಡ್‌ನಲ್ಲಿಯೇ ಇವೆ! ಕತ್ತಲ ಗವಿಯಂತಿರುವ ಅಂಡರ್ ಗ್ರೌಂಡ್‌ನಲ್ಲಿ ನಿಮಿಷಕ್ಕೊಂದರಂತೆ ಟ್ರಾಮ್ ಗಾಡಿಗಳು ಧಡಧಡ ಶಬ್ದ ಮಾಡುತ್ತಾ ಹೋಗುತ್ತಿರುತ್ತವೆ. ಅಂಡರ್ ಗ್ರೌಂಡಿನಿಂದ ಮೇಲೆ ಹತ್ತಲಿಕ್ಕೆ ಮತ್ತು ಅಂಡರ್ ಗ್ರೌಂಡಿನ ನಿಲ್ದಾಣಕ್ಕೆ ಇಳಿಯಲು 'Escalators' (ಎಸ್ಕೆಲೇಟರ್ಸ್) ಎಂಬ ಮೆಟ್ಟಿಲುಗಳನ್ನು ಮಾಡಿದ್ದಾರೆ. ಇವು ಒಂದೇ ಸಮನೆ ತಿರುಗುತ್ತಿರುತ್ತವೆ. ಒಂದು ಮೆಟ್ಟಿಲಿನ ಮೇಲೆ ಹೋಗಿ ನಿಂತರೆ ತೀರಿತು. ಅನಾಯಾಸವಾಗಿ ಮೇಲೆ ಇಲ್ಲವೆ ಕೆಳಗೊಯ್ದು ಬಿಡುತ್ತವೆ.

ನಾನು ಲಂಡನ್ ನಗರದ ಪೇಟೆಯಲ್ಲಿ ತಿರುಗಾಡುವಾಗ **'ವೂಲವರ್ಥ'** ಎಂಬ **'ಸ್ಟೇಷನರಿ'** ಅಂಗಡಿಯನ್ನು ನೋಡಿದೆ. ಇದೊಂದು ಮಹಾಕೋಶದಂತಿದೆ. ಈ **ವೂಲವರ್ಥ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ(ಚಡ್ಡಿ), ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಎಲ್ಲವೂ ದೊರೆಯುತ್ತವೆ.** ಇಲ್ಲಿ ಎಲ್ಲ ತರಹದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ.

ಅಲ್ಲಿ ಮುಂದೆ ಹೋದಾಗ ಸ್ಟ್ರಾಂಡ್‌ದಲ್ಲಿಯ ಸ್ಯಾವ್ಯೊಯ್ ಸಿಂಪಿಗಳನ್ನು(ದರ್ಜಿಗಳು–ಟೈಲರ್ಸ್) ನೋಡಿದೆ. ಅವರು ಇಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ. ಅವರು ಇಲ್ಲಿಯ ಒಂದು ಸಾದಾ ಸೂಟು ಹೊಲಿಯಬೇಕಾದರೂ ಸುಮಾರು ನೂರು ರೂಪಾಯಿ ಪಡೆಯುತ್ತಾರೆ. ಆದರೆ 'Fifty Shilling Tailors' (ಐವತ್ತು ಶೀಲಿಂಗಿನ ಸಿಂಪಿಗಳು) ಎಂಬ ಒಂದು ಸಂಸ್ಥೆಯ ಶಾಖೆಗಳೂ ಎಲ್ಲ ಕಡೆಗೆ ಇವೆ. ಅವರು ಐವತ್ತು ರೂಪಾಯಿಗೆ ಸಾದಾ ಸೂಟು ಹೊಲಿದು ಕೊಡುತ್ತಾರೆ.

ಲಂಡನ್ನಿನ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. **ಉಪಹಾರ ಗೃಹಗಳಲ್ಲಿ ಮಾಣಿಗಳಾಗಿ, ದೊಡ್ಡ ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್ ಆಗಿ, ಕಾರಕೂನರಾಗಿ (ಗುಮಾಸ್ತರು), ಸಿನಿಮಾ ಗೃಹದಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕೆಲಸದಲ್ಲಿ ಹೆಣ್ಣುಮಕ್ಕಳು ನಿಯುಕ್ತರಾಗಿರುತ್ತಾರೆ**. ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿಯೇ ಕಾಣಬೇಕೆಂದು ಆಂಗ್ಲರ ಮತ. ಇದು ಹೆಣ್ಣನ್ನು ಸತ್ಕರಿಸುವ ರೀತಿ.

ನಂತರ **ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್ ಕ್ರಾಸ್'** ನಲ್ಲಿ ಹೋದೆ. ಆ ಓಣಿಯಲ್ಲಿ ಇಂಡಿಯಾ ಆಫೀಸು ಇದೆ. ಅಲ್ಲಿಯ ವಾಚನಾಲಯದಲ್ಲಿ ಅನೇಕ ಮಹತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ವಿಷಯಗಳು ಇಲ್ಲಿ ಗೊತ್ತಾಗಬಹುದೆಂದು ಕಾಣುತ್ತದೆ. ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ

ಮಾದರಿಗಳು ನೋಡಲು ದೊರೆಯುತ್ತವೆ. ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ. ಇಂಡಿಯಾ ಆಫೀಸಿನ ಹತ್ತಿರ ಆಫ್ರಿಕನ್ ಕಚೇರಿ, ಇನ್ನೊಂದು ವಸಾಹತಿನ ಕಚೇರಿ, ನೂರೆಂಟು ಬ್ಯಾಂಕ್‌ಗಳು ದೊಡ್ಡ ಕಂಪೆನಿಗಳ ಕಚೇರಿಗಳು, ಎಲ್ಲವೂ ಇಲ್ಲಿವೆ. ಒಂದೊಂದು ದೇಶದ ಮೇಲಿನ ಪ್ರಭುತ್ವ ಇಲ್ಲಿಯ ಒಂದೊಂದು ಕಚೇರಿಯಿಂದ ನಡೆಯುತ್ತಿದೆ. ಈ ಚೇರಿಂಗ್ ಕ್ರಾಸ್ ಎಂಬ ದೊಡ್ಡ ಬೀದಿಯು ಆಂಗ್ಲ ಸಾಮ್ರಾಜ್ಯದ ಬೀದಿ ಆಗಿದೆ.

ನಂತರ **ನೆಲ್ಸನ್ ಮೂರ್ತಿ ಇರುವ ಸ್ಥಳ 'ಟ್ರಾಫಲ್ಗಾರ್ ಸ್ಕ್ವೇರ್'** (Trafalgar Square) ಎಂಬ ಸರ್ಕಲ್‌ಗೆ ಹೋದೆ. ಈ ಶಿಲಾಮೂರ್ತಿಯ ಕೆಳಬದಿಗೆ ಅವನ ಜೀವನದಲ್ಲಿಯ ಮಹತ್ತ್ವದ ಸನ್ನಿವೇಶಗಳನ್ನು ಕಲ್ಲಿನಲ್ಲಿ ಕೆತ್ತಿದ್ದಾರೆ. ಈತನೊಬ್ಬ ಯೋಧ. ಕ್ರಿ.ಶ. 1805ರಲ್ಲಿ ಟ್ರಾಫಲ್ಗರ್ ಯುದ್ಧದಲ್ಲಿ ಹೋರಾಡಿ ಮಡಿದವನು. ಇಲ್ಲಿಂದ ತುಸುದೂರಕ್ಕೆ ವೆಲಿಂಗ್ಟನ್ನನ ಶಿಲಾಪ್ರತಿಮೆ ಇದೆ. ಹೀಗೆ ಲಂಡನ್ನಿನ ಬೀದಿಬೀದಿಗೆ ಮೂಲೆಮೂಲೆಗೆ ಇತಿಹಾಸ ಪ್ರಸಿದ್ಧ ಪುರುಷರ ಮೂರ್ತಿಗಳು ಇವೆ. ಇವರು ಇಂಗ್ಲೆಂಡ್ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು. ಕೈಯೆತ್ತಿ ನಿಂತಿರುವ ಈ ಮೂರ್ತಿಗಳು **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"** ಎಂದು ಹೇಳುತ್ತಿರುವಂತೆ ತೋರುತ್ತದೆ. ಇದು ಆ ದೇಶದ ನಾಯಕರು ತಮ್ಮ ದೇಶದ ಮೇಲಿನ ಗೌರವವನ್ನು ಹೆಮ್ಮೆಯಿಂದ ಹೇಳಿಕೊಂಡಂತಿದೆ. ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ.

ಹೀಗೆ ಮುಂದೆ ಹೋಗುತ್ತ ತಿರುಗಾಡುವ ಜನರನ್ನು ಅಲ್ಲಿ ನೋಡುತ್ತಿದ್ದೆ. ಲಂಡನ್ ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ತಿರುಗಾಡುತ್ತಾರೆ. ಅವಸರದಿಂದ ಓಡುತ್ತಾರೆ. ಅಂದರೆ ಸಮಯಕ್ಕೆ ಬಹಳ ಪ್ರಾಮುಖ್ಯ ನೀಡುತ್ತಾರೆ. ವಿದೇಶಿಯರು ಹಣಗಳಿಸಲು ಅವಸರ ಪಡುತ್ತಾರೆ. ಅವರಿಗೆ ಸಮಯವೇ ಹಣ. **"ಹೊತ್ತು! ಹೊತ್ತು! ಹೊತ್ತೇ ಹಣ"** (time! time! time is money) ಇದು ಅಕ್ಷರಶಃ ವಿಲಾಯಿತಿ(ವಿದೇಶ)ಯಲ್ಲಿ ನಿಜವಾಗಿದೆ.

ಹೀಗೆ ಮುಂದೆ ಹೋಗುವಾಗ ಇಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಯನ್ನು ಕುತೂಹಲದಿಂದ ನೋಡಿದೆ. ಆ **ಟೊಪ್ಪಿಗೆಗೆಗಳ ವಿಶೇಷತೆ ಏನೆಂದರೆ ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಟಪಕ್ಷ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ.**

ನಂತರ ಲಂಡನ್ ನಗರದ ಬಹುಪ್ರಸಿದ್ಧವಾದ ಸ್ಮಾರಕವೊಂದನ್ನು ನೋಡಲು ಹೋದೆ. **'ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ.** ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ. ಸತ್ತವರಿಗೋಸ್ಕರ ಸ್ಥಾಪಿಸಿದ ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. 300 ವರ್ಷಗಳ ಹಿಂದೆ ಬ್ಲ್ಯೂಮಾಂಟ್ ಎಂಬ ಕವಿಯು ಈ ಗೋರಿಯನ್ನು ನೋಡಿ ಮರ್ತ್ಯತ್ವವೇ(ಮನುಷ್ಯ ಸ್ವಭಾವವೇ) ಎಷ್ಟು ಗೋರಿ(ಸಮಾಧಿ) ಗುಂಪುಗಳು ಇಲ್ಲಿವೆ ನೋಡಿ ಅಂಜು (ಹೆದರು) ("Mortality behold and fear What a litt'r of tombs is here.") ಎಂಬ ಹಾಡನ್ನು ಬರೆದಿದ್ದಾನೆ. ಗೋಲ್ಡ್‌ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು Visit to West Minster Abbey (ವೆಸ್ಟ್‌ಮಿನ್‌ಸ್ಟರ್ ಅಬೆಯ ಸಂದರ್ಶನ) ಎಂಬ ವಿಷಯದ ಮೇಲೆ ಉತ್ತಮವಾದ ನಿಬಂಧಗಳನ್ನು ಬರೆದಿದ್ದಾರೆ. ಇಂದಿಗೂ ಇದು ಕಬ್ಬಿಗರ (ಕವಿ) ಸ್ಫೂರ್ತಿಯ ತವರು ಮನೆಯಾಗಿದೆ. ಹೊರಗಿನಿಂದ ಉತ್ತಮವಾಗಿ ಶೃಂಗರಿಸಿದ ಸಣ್ಣ ಬಾಗಿಲೊಂದು ಕಾಣುತ್ತಿದೆ. ಒಳಗೆ ಮಾತ್ರ ಕಟ್ಟಡವು ಭವ್ಯವಾಗಿದೆ.





ಒಳಗೆ ಸಾಗುವ ಹಾದಿಯ ಎಡಬಲಕ್ಕೆ ಚತುರ ರಾಜಕಾರಣಿಗಳ ಶಿಲಾಮೂರ್ತಿಗಳಿವೆ. ರಾಜರಿಗಿಂತ, ಕವಿಗಳಿಗಿಂತ ಇವರೇ ಆಂಗ್ಲರ ಕೀರ್ತಿ ಧ್ವಜವನ್ನು ನಿಲ್ಲಿಸಿದರೆಂದು ಇಲ್ಲಿಯವರ ಅಭಿಪ್ರಾಯವೆಂದು ಕಾಣುತ್ತದೆ. ಮುಂದೆ ಹೋಗುವಾಗ ಸಹಜವಾಗಿ ಮೇಲಕ್ಕೆ ಮುಖವೆತ್ತಿ ನೋಡಲು, ಅಲ್ಲಿ ಅರ್ಲ್ ಆಫ್ ಚ್ಯಾಟ್ಹಾಂನು ನನ್ನ ಕಡೆ ನೋಡುತ್ತ ನಿಂತಿದ್ದನು ಎನ್ನುವಂತೆ ಮೂರ್ತಿ ಇತ್ತು. ಹಾಗೇ ಎದುರಿಗೆ ನಿಟ್ಟಿಸಿ ನೋಡಿದೆ. ಗ್ಯಾಡ್‌ಸ್ಟನ್, ಮಾಲ್ಫ್ ಡಿಸ್‌ರೇಲಿ ಮೊದಲಾದವರು ಕಣ್ಣಿಗೆ ಬಿದ್ದರು.

ಆಮೇಲೆ ಪೊಯೆಟ್ಸ್ ಕಾರ್ನರ್ (ಕವಿಗಳ ಮೂಲೆ)ಗೆ ಹೋದೆ. ಆ **ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್, ಪ್ರಸಿದ್ಧ ವಿಮರ್ಶಕನಾದ ಡ್ರಾಯ್‌ಡನ್, ಬ್ರಿಟನ್‌ನ್ನಿನ ರಾಷ್ಟ್ರಕವಿ ವರ್ಡ್ಸ್‌ವರ್ತ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಮೊದಲಾದವರ ಸಮಾಧಿಗಳಿವೆ.** ನಮ್ಮ ದೇಶದಲ್ಲಿ ಸತ್ತವರೆಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ ಇಲ್ಲಿ ಒಂದೊಂದು ಕಲ್ಲನ್ನು ಕೊಟ್ಟಿದ್ದಾರೆ. ಈ ಕಲ್ಲುಗಳ ಮೇಲೆ ಹಾಯ್ದಾಡುತ್ತಾ ನಾವು ಹೋಗುತ್ತೇವೆ. ಪ್ರತಿಯೊಂದು ಹೆಜ್ಜೆಯ ಬುಡಕ್ಕೆ ಬಿಜ್ಜೆ(ವಿದ್ಯೆ)ಯ ಭಾರವನ್ನು ತುಳಿಯುತ್ತೇವೆ. ಅವುಗಳನ್ನು ತುಳಿಯುತ್ತ ಹೋಗುವಾಗ ಇದು ತಪ್ಪು ಹೆಜ್ಜೆಯಲ್ಲವೇ ಎಂದು ಹೆದರಿಕೆಯು ನಮ್ಮನ್ನು ಹಿಡಿದು ನಿಲ್ಲಿಸುತ್ತದೆ. ಕಡೆಗೆ ದಿಕ್ಕುತಪ್ಪಿದಂತಾಗಿ **"ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ಮಣ್ಣು, ಮಣ್ಣು!"** ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ ಎಂಬ ಭಾವನೆ ಮೂಡುತ್ತದೆ.

ನಂತರ ವೈಜ್ಞಾನಿಕರ ಮೂಲೆಗೆ ಹೋದೆ. ಇಲ್ಲಿ ನ್ಯೂಟನನ ದೊಡ್ಡದಾದ ಶಿಲಾಮೂರ್ತಿಯನ್ನು ನಿಲ್ಲಿಸಿದ್ದಾರೆ. ಡಾರ್ವಿನ್, ಹರ್ಶೆಲ್ ಮೊದಲಾದವರ ಮೂರ್ತಿಗಳಿವೆ. ಇದಕ್ಕೆ ಹತ್ತಿರದಲ್ಲಿ ವ್ಯಾಪಾರಿಗಳು, ವಾಸ್ತುಶಿಲ್ಪಿಗರು, ಸರದಾರರು, ಸೇನಾಪತಿಗಳು ಮೊದಲಾದ ಅನೇಕರಿಗೆ ಜಾಗವು ದೊರೆತಿದೆ.

ಆಮೇಲೆ ಅರಸರ ಅರಮನೆಗೆ ಹೋದೆ. ಅಲ್ಲಿ ಇಂಗ್ಲೆಂಡನ್ನು ಆಳಿದ ರಾಜ–ರಾಣಿಯರ ಮೂರ್ತಿಗಳಿವೆ. ಇದಕ್ಕೆ Royal Chapel (ರಾಜವಿಭಾಗ) ಎಂದು ಹೆಸರು. ರಾಜದಂಡವೂ, ಕಿರೀಟವೂ ನೆಲಕ್ಕುರುಳಲೇಬೇಕು ಎಂಬುದು ನಿಜವಾಗಿದ್ದರೂ ಸತ್ತಮೇಲೆ ಅವರಿಗೊಂದು

ವಿಶಿಷ್ಟ ಸ್ಥಾನವನ್ನು ಕಲ್ಪಿಸಿದ್ದಾರೆ. ಈ ರಾಜಮಂದಿರದಲ್ಲಿ ಸಿಂಹದದೆಯ ರಿಚರ್ಡ್, 2ನೆಯ ಎಡ್ವರ್ಡ್, ಅರ್ಲ್ ಆಫ್ ಸ್ಟ್ಯಾಫೋರ್ಡ್, ರಾಣಿ ಎಲಿಜಬೆತ್, 1ನೆಯ ಜೇಮ್ಸ್ ಮೊದಲಾದವರ ಮೂರ್ತಿಗಳಿವೆ. ಮುಖ್ಯತಃ ಗೋರಿಯ ಮೇಲೆ ಆ ವ್ಯಕ್ತಿಯು ಮಲಗಿಕೊಂಡಂತೆ ಮೂರ್ತಿಗಳನ್ನು ಕೆತ್ತಿದ್ದಾರೆ. ಇಲ್ಲಿಯ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿವೆ. ಮಂದಿರದ ಹಿಂದೆ ಭವ್ಯವಾಗಿ 7ನೆಯ ಹೆನ್ರಿಯ ಗೋರಿಯು ನಿಂತಿದೆ.

ನಂತರ ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿಯ ಮತ್ತೊಂದು ಭಾಗದಲ್ಲಿ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನವಿದೆ. **'ಸ್ಟೋನ್ ಆಫ್ ಸ್ಕೋನ್'** ಎಂದು ಇದರ ಹೆಸರು. ಈ ಕಲ್ಲುಪಾಟಿಯ ವಿಶೇಷತೆ ಏನೆಂದರೆ ಬ್ರಿಟಿಷ್ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಈ ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಅದರಲ್ಲಿ ಯಾವ ಸಿದ್ಧಿಯಿದೆಯೋ, ಯಾವ ಮಂತ್ರವಿದೆಯೋ ನಾನರಿಯೆ. ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಅದರಲ್ಲಿರಬೇಕೆನಿಸುತ್ತದೆ.

ಇಲ್ಲಿಗೆ ನನ್ನ ಪ್ರವಾಸದ ವರ್ಣನೆ ಮುಗಿಯಿತು. ಈ ಪ್ರವಾಸದಿಂದ ನನ್ನ ಮನಸ್ಸು ಎಷ್ಟೊಂದು ವಿಕಾಸವನ್ನು ಹೊಂದಿದೆ. ನನ್ನ ದೃಷ್ಟಿಯು ಎಷ್ಟು ವಿಶಾಲವಾಗಿದೆ. ನನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ. ಇದನ್ನೆಲ್ಲ ನೆನೆಸಿಕೊಂಡಾಗ **"ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"** ಎಂದು ಬೇಕನ್ನನು ಹೇಳಿದ ಮಾತು ನೆನಪಾಗುತ್ತದೆ. **"ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"** ಎಂಬ ಷೇಕ್ಸ್‌ಪಿಯರನ ನುಡಿಯು ಮನಸ್ಸಿನಲ್ಲಿ ಮೂಡುತ್ತದೆ.

## ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?**
**ಉತ್ತರ:** ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ (ಅಂಡರ್ ಗ್ರೌಂಡ್) ಓಡಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ.

**2. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?**
**ಉತ್ತರ:** ನೆಲ್ಸನ್‌ರವರ ಮೂರ್ತಿ ಇರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್'.

**3. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?**
**ಉತ್ತರ:** 'ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರ ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ.

**4. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?**
**ಉತ್ತರ:** ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್ ಕ್ರಾಸ್'.

## ಹೆಚ್ಚುವರಿ ಪ್ರಶ್ನೋತ್ತರಗಳು

**5. ಸ್ಯಾವ್ಹೋಯ್ ಸಿಂಪಿಗಳು ಒಂದು ಸಾದಾ ಸೂಟು ಹೊಲಿಯಲು ಎಷ್ಟು ರೂಪಾಯಿ ತೆಗೆದುಕೊಳ್ಳುತ್ತಾರೆ?**
**ಉತ್ತರ:** ಸ್ಯಾವ್ಹೋಯ್ ಸಿಂಪಿಗಳು ಒಂದು ಸಾದಾ ಸೂಟು ಹೊಲಿಯಲು ಸುಮಾರು ನೂರು ರೂಪಾಯಿ ತೆಗೆದುಕೊಳ್ಳುತ್ತಾರೆ.

**6. ಲಂಡನ್ ನಗರದಲ್ಲಿ ಇಂಡಿಯಾ ಆಫೀಸು ಯಾವ ಓಣಿಯಲ್ಲಿದೆ?**
**ಉತ್ತರ:** ಲಂಡನ್ ನಗರದಲ್ಲಿ ಇಂಡಿಯಾ ಆಫೀಸು 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿದೆ.

**7. ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದವರು ಯಾರು?**
**ಉತ್ತರ:** ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದವರು ಅಲ್ಲಿಯ ಚತುರ ರಾಜಕಾರಿಣಿಗಳು.

**8. ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿರುವ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನದ ಮತ್ತೊಂದು ಹೆಸರೇನು?**
**ಉತ್ತರ:** ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿರುವ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನದ ಮತ್ತೊಂದು ಹೆಸರು 'ಸ್ಟೋನ್ ಆಫ್ ಸ್ಕೋನ್'.

**9. ಕಲ್ಲುಪಾಟಿಯನ್ನು 3ನೇ ಎಡ್ವರ್ಡನು ಯಾವ ಅರಸರಿಂದ ಕಿತ್ತುಕೊಂಡು ಬಂದನು?**
**ಉತ್ತರ:** ಕಲ್ಲುಪಾಟಿಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದನು.

**10. ಟ್ರಾಮ್ ಗಾಡಿಗಳು ಹೇಗೆ ಹೋಗುತ್ತವೆ?**
**ಉತ್ತರ:** ಕತ್ತಲ ಗವಿಯಂತಿರುವ ಅಂಡರ್ ಗ್ರೌಂಡ್‌ನಲ್ಲಿ ನಿಮಿಷಕ್ಕೊಂದರಂತೆ ಟ್ರಾಮ್ ಗಾಡಿಗಳು ಧಡಧಡ ಶಬ್ಧ ಮಾಡುತ್ತಾ ಹೋಗುತ್ತಿರುತ್ತವೆ.

**11. ವೈಜ್ಞಾನಿಕರ ಮೂಲೆಯಲ್ಲಿ ಕಂಡುಬರುವ ದೊಡ್ಡದಾದ ಶಿಲಾಮೂರ್ತಿ ಯಾರದ್ದು?**
**ಉತ್ತರ:** ವೈಜ್ಞಾನಿಕರ ಮೂಲೆಯಲ್ಲಿ ಕಂಡುಬರುವ ದೊಡ್ಡದಾದ ಶಿಲಾಮೂರ್ತಿ ಪ್ರಸಿದ್ಧ ವಿಜ್ಞಾನಿ ನ್ಯೂಟನ್‌ರದ್ದಾಗಿದೆ.

**12. ಇಂದಿಗೂ ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿರುವುದು ಯಾವುದು?**
**ಉತ್ತರ:** ಇಂದಿಗೂ ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿರುವುದು ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬ ಪ್ರಾರ್ಥನಾ ಮಂದಿರ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**
**ಉತ್ತರ:** 'ವೂಲವರ್ಥ' ಎಂಬುದು 'ಸ್ಟೇಷನರಿ' ಅಂಗಡಿ. ಇದೊಂದು ಮಹಾಕೋಶದಂತಿದೆ. ಈ ವೂಲವರ್ಥ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ (ಚಡ್ಡಿ), ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧಸಾಮಗ್ರಿ ಎಲ್ಲವೂ ದೊರೆಯುತ್ತವೆ.

**2. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**
**ಉತ್ತರ:** ಲಂಡನ್ನಿನ ಹೆಣ್ಣು ಮಕ್ಕಳು ಉಪಹಾರ ಗೃಹಗಳಲ್ಲಿ ಮಾಣಿಗಳಾಗಿ, ದೊಡ್ಡ ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್ ಆಗಿ, ಕಾರಕೂನರಾಗಿ (ಗುಮಾಸ್ತರು), ಹಾಗೂ ಸಿನಿಮಾ ಗೃಹದಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ.

**3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**
**ಉತ್ತರ:** ಟೊಪ್ಪಿಗೆಗಳ ವಿಶೇಷತೆಯನ್ನು ಕುರಿತು **"**ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ**"** ಎಂದು ಲೇಖಕರು ದಾಖಲಿಸಿದ್ದಾರೆ.

**4. ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?**
**ಉತ್ತರ:** ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್‌ಸ್ಮಿತ್, ಪ್ರಸಿದ್ಧ ವಿಮರ್ಶಕನಾದ ಡ್ರಾಯ್‌ಡನ್, ಬ್ರಿಟನ್ನಿನ ರಾಷ್ಟ್ರಕವಿ ವರ್ಡ್ಸ್‌ವರ್ತ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಮೊದಲಾದವರ ಸಮಾಧಿಗಳಿವೆ.

**5. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ (ಸ್ಟೋನ್ ಆಫ್ ಸ್ಕೋನ್) ವಿಶೇಷತೆಯೇನು?**
**ಉತ್ತರ:** ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನೆಂದರೆ ಬ್ರಿಟಿಷ್ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರೂ ಕೂರುವ ಸಿಂಹಾಸನದ ಮೇಲೆ ಈ ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡ ಬೇಕು. ಈ ಶಿಲೆಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಈ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನವಿದೆ. **'ಸ್ಟೋನ್ ಆಫ್ ಸ್ಕೋನ್'** ಎಂದು ಇದರ ಹೆಸರು.

**ಹೆಚ್ಚುವರಿ ಪ್ರಶ್ನೋತ್ತರಗಳು**

**6. ಚೇರಿಂಗ್ ಕ್ರಾಸ್ ಓಣಿಯ ವಿಶೇಷತೆಯೇನು?**
**ಉತ್ತರ:** ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಚೇರಿಂಗ್ ಕ್ರಾಸ್. ಈ ಓಣಿಯಲ್ಲಿ ಇಂಡಿಯಾ ಆಫೀಸು ಇದೆ. ಈ ಆಫೀಸಿನ ಹತ್ತಿರ ಆಫ್ರಿಕನ್ ಕಚೇರಿ, ಇನ್ನೊಂದು ವಸಾಹತಿನ ಕಚೇರಿ, ನೂರೆಂಟು ಬ್ಯಾಂಕ್‌ಗಳು ದೊಡ್ಡ ಕಂಪೆನಿಗಳ ಕಚೇರಿಗಳು, ಎಲ್ಲವೂ ಇಲ್ಲಿವೆ. ಒಂದೊಂದು ದೇಶದ ಮೇಲಿನ ಪ್ರಭುತ್ವ ಇಲ್ಲಿಯ ಒಂದೊಂದು ಕಚೇರಿಯಿಂದ ನಡೆಯುತ್ತಿದೆ. ಈ ಚೇರಿಂಗ್ ಕ್ರಾಸ್ ಎಂಬ ದೊಡ್ಡ ಬೀದಿಯು ಆಂಗ್ಲ ಸಾಮ್ರಾಜ್ಯದ ಬೀದಿ ಆಗಿದೆ.

**7. ಚೇರಿಂಗ್ ಕ್ರಾಸ್ ಓಣಿಯಲ್ಲಿರುವ ಇಂಡಿಯಾ ಆಫೀಸು ಕುರಿತು ಬರೆಯಿರಿ.**
**ಉತ್ತರ:** ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ **'ಚೇರಿಂಗ್ ಕ್ರಾಸ್'** ಓಣಿಯಲ್ಲಿ ಇಂಡಿಯಾ ಆಫೀಸು ಇದೆ. ಅಲ್ಲಿಯ ವಾಚನಾಲಯದಲ್ಲಿ ಅನೇಕ ಮಹತ್ತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ವಿಷಯಗಳು ಇಲ್ಲಿ ಗೊತ್ತಾಗಬಹುದೆಂದು ಕಾಣುತ್ತದೆ. ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ. ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ.

**8. ರಾಜಮಂದಿರದಲ್ಲಿರುವ ಮೂರ್ತಿಗಳ ಹೆಸರನ್ನು ತಿಳಿಸಿ.**
**ಉತ್ತರ:** ರಾಜಮಂದಿರದಲ್ಲಿ ಸಿಂಹದೆದೆಯ ರಿಚರ್ಡ್, 2ನೆಯ ಎಡ್ವರ್ಡ್, ಅರ್ಲ್ ಆಫ್ ಸ್ಟ್ಯಾಫೋರ್ಡ್, ರಾಣಿ ಎಲಿಜಬೆತ್, 1ನೆಯ ಜೇಮ್ಸ್ ಮೊದಲಾದವರ ಮೂರ್ತಿಗಳಿವೆ. ಮುಖ್ಯತಃ ಗೋರಿಯ ಮೇಲೆ ಆ ವ್ಯಕ್ತಿಯು ಮಲಗಿಕೊಂಡಂತೆ ಮೂರ್ತಿಗಳನ್ನು ಕೆತ್ತಿದ್ದಾರೆ. ಮಂದಿರದ ಹಿಂದೆ ಭವ್ಯವಾಗಿ 7ನೆಯ ಹೆನ್ರಿಯ ಗೋರಿಯು ನಿಂತಿದೆ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?**
**ಉತ್ತರ:** ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಲಂಡನ್ ನಗರದ ವ್ಯಾಪಾರ, ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಓಡಾಡುವ ವ್ಯವಸ್ಥೆ ಮತ್ತು ಭೂಗರ್ಭವನ್ನು ಹತ್ತಿ ಇಳಿಯಲು ಇರುವ ಎಸ್ಕಲೇಟರ್ಸ್ ಕುರಿತು ಗುರುತಿಸಿದ್ದಾರೆ. ನಂತರ ಪೇಟೆಯಲ್ಲಿನ ವೂಲವರ್ಥ ಎಂಬ ಸ್ಟೇಷನರಿ ಅಂಗಡಿ. ಈ ಅಂಗಡಿಯಲ್ಲಿ ಸಿಗುವ ಬೂಟು, ಸಾಬೂನು, ಪುಸ್ತಕ, ಹೂವು, ಯುದ್ಧ ಸಾಮಾಗ್ರಿಗಳು ಮುಂತಾದ ವಸ್ತುಗಳನ್ನು ಹೆಸರಿಸಿದ್ದಾರೆ. ಆನಂತರ ಸೂಟು ಹೊಲಿಯುವ ಸಿಂಪಿಗಳ ಬಗ್ಗೆ ವಿವರಿಸಿದ್ದಾರೆ. ಲಂಡನ್ನಿನ ಹೆಣ್ಣು ಮಕ್ಕಳು ಮಾಣಿ, ಟೈಪಿಸ್ಟ್, ಕಾರಕೂನ ಮುಂತಾದ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ಎಂಬುದನ್ನು ಗುರುತಿಸಿದ್ದಾರೆ. ನಂತರ ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಚೇರಿಂಗ್ ಕ್ರಾಸ್. ಈ ಓಣಿಯಲ್ಲಿನ ಇಂಡಿಯಾ ಆಫೀಸು ಮತ್ತು ಅದರ ವಿಶೇಷತೆ ಹಾಗೂ ಚೇರಿಂಗ್ ಕ್ರಾಸ್ ಎಂಬ ದೊಡ್ಡ ಬೀದಿಯು ಆಂಗ್ಲ ಸಾಮ್ರಾಜ್ಯದ ಬೀದಿ ಆಗಿರುವುದರ ವಿಶೇಷತೆಯನ್ನು ಗುರುತಿಸಿದ್ದಾರೆ.

ನಂತರ ಟ್ರಾಫಲ್ಗಾರ್ ಸ್ಕ್ವೇಯರ್‌ನಲ್ಲಿರುವ ನೆಲ್ಸನ್‌ಮೂರ್ತಿ ಮತ್ತು ಆತನ ವಿಶೇಷತೆಯನ್ನು ಹೇಳಿದ್ದಾರೆ. ಹೆಣ್ಣು ಮಕ್ಕಳ ವೈವಿಧ್ಯಮಯ ಟೊಪ್ಪಿಗೆಯ ವಿಶೇಷತೆಯನ್ನು ಕುರಿತು ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಟಪಕ್ಷ ಬೇರೆಯಾಗಿರುತ್ತದೆ ಎಂಬುದನ್ನು ಗುರುತಿಸಿದ್ದಾರೆ. 'ವೆಸ್ಟ್ ಮಿನ್‌ಸ್ಟರ್ ಅಬೆ'ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಕಬ್ಬಿಗರ ಸ್ಪೂರ್ತಿಯ ತವರು ಮನೆಯಾಗಿರುವುದು. ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಮೊದಲಾದವರ ಸಮಾಧಿಗಳಿವೆ. ನ್ಯೂಟನ್ ಮೊದಲಾದ ವಿಜ್ಞಾನಿಗಳ ಶಿಲಾ ಮೂರ್ತಿಗಳಿರುವುದು. ರಾಜಮಂದಿರದಲ್ಲಿ ಸಿಂಹದೆದೆಯ ರಿಚರ್ಡ್, 2ನೆಯ ಎಡ್ವರ್ಡ್, ರಾಣಿ ಎಲಿಜಬೆತ್, ಮೊದಲಾದವರ ಮೂರ್ತಿಗಳಿವೆ. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿ ಹಾಗೂ ಈ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನ ಸ್ಟೋನ್ ಆಫ್ ಸ್ಕೋನ್ ಮುಂತಾದವುಗಳ ವಿಶೇಷತೆಯನ್ನು ಗುರುತಿಸಿದ್ದಾರೆ.

**2. 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.**

**ಉತ್ತರ:** 'ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ. ಸತ್ತವರಿಗೋಸ್ಕರ ಸ್ಥಾಪಿಸಿದ ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. ಆದ್ದರಿಂದ ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. 300 ವರ್ಷಗಳ ಹಿಂದೆ ಬ್ಯೂಮಾಂಟ್ ಎಂಬ ಕವಿಯು ಈ ಗೋರಿಯನ್ನು ನೋಡಿ ಮರ್ತ್ಯತ್ವವೇ ಎಷ್ಟು ಗೋರಿ ಗುಂಪುಗಳು ಇಲ್ಲಿವೆ ನೋಡಿ ಅಂಜು ಎಂಬ ಹಾಡನ್ನು ಬರೆದಿದ್ದಾನೆ. ಗೋಲ್ಡ್‌ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು 'ವೆಸ್ಟ್‌ಮಿನ್‌ಸ್ಟರ್ ಅಬೆಯ ಸಂದರ್ಶನ' ಎಂಬ ವಿಷಯದ ಮೇಲೆ ಉತ್ತಮವಾದ ನಿಬಂಧಗಳನ್ನು ಬರೆದಿದ್ದಾರೆ. ಇಂದಿಗೂ ಇದು ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿದೆ.

ಈ ಮಂದಿರದಲ್ಲಿ ಆಂಗ್ಲರ ಕೀರ್ತಿ ಧ್ವಜವನ್ನು ನಿಲ್ಲಿಸಿದ ಚತುರ ರಾಜಕಾರಣಿಗಳಾದ ಗ್ಯಾಡ್‌ಸ್ಟನ್, ಮಾಲ್ಫ್ ಡಿಸ್‌ರೇಲಿ ಮೊದಲಾದವರ ಶಿಲಾಮೂರ್ತಿಗಳಿವೆ. ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್ ರಾಷ್ಟ್ರಕವಿ ವರ್ಡ್ಸ್‌ವರ್ತ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಮೊದಲಾದವರ ಸಮಾಧಿಗಳಿವೆ. ವೈಜ್ಞಾನಿಕರ ಮೂಲೆಯಲ್ಲಿ ನ್ಯೂಟನ್‌ನ ದೊಡ್ಡದಾದ ಶಿಲಾಮೂರ್ತಿಯನ್ನು ನಿಲ್ಲಿಸಿದ್ದಾರೆ. ಡಾರ್ವಿನ್, ಹರ್ಶೆಲ್ ಮೊದಲಾದವರ ಮೂರ್ತಿಗಳಿವೆ. ಇದಕ್ಕೆ ಹತ್ತಿರದಲ್ಲಿ ವ್ಯಾಪಾರಿಗಳು, ವಾಸ್ತುಶಿಲ್ಪಿಗರು, ಸರದಾರರು, ಸೇನಾಪತಿಗಳು ಮೊದಲಾದ ಅನೇಕರಿಗೆ ಜಾಗವು ದೊರೆತಿದೆ. ರಾಜಮಂದಿರ ವಿಭಾಗದಲ್ಲಿ ಇಂಗ್ಲೆಂಡನ್ನು ಆಳಿದ ರಾಜ–ರಾಣಿಯರಾದ ಸಿಂಹದೆದೆಯ ರಿಚರ್ಡ್, 2ನೆಯ ಎಡ್ವರ್ಡ್, ರಾಣಿ ಎಲಿಜಬೆತ್, 1ನೆಯ ಜೇಮ್ಸ್ ಮೊದಲಾದವರ ಮೂರ್ತಿಗಳಿವೆ. ಇಲ್ಲಿಯ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿವೆ. ಮಂದಿರದ ಹಿಂದೆ ಭವ್ಯವಾಗಿ 7ನೆಯ ಹೆನ್ರಿಯ ಗೋರಿಯು ನಿಂತಿದೆ. ಹೀಗೆ ಇದೊಂದು ಪ್ರಾರ್ಥನಾ ಮಂದಿರವಾಗಿದ್ದರೂ ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸ, ಕಲೆ, ಸಾಹಿತ್ಯ, ವಿಜ್ಞಾನದದ ಗುರುತುಗಳನ್ನು ಸ್ಮರಿಸುವ ಒಂದು ವಿಶೇಷ ಸ್ಮಾರಕವಾಗಿದೆ ಎಂದು ಹೇಳಬಹುದು.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ."**

**ಆಯ್ಕೆ:–** ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಲೇಖಕರು ಲಂಡನ್ ನಗರದ ಬೀದಿಬೀದಿಯಲ್ಲಿ, ಮೂಲೆಮೂಲೆಯಲ್ಲಿ ನಿಲ್ಲಿಸಿದ ಇತಿಹಾಸ ಪ್ರಸಿದ್ಧ ಪುರುಷರ ಶಿಲಾಪ್ರತಿಮೆಗಳನ್ನು ನೋಡಿದಾಗ ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದು ಕೈಯೆತ್ತಿ ನಿಂತ ಆ ಪ್ರತಿಮೆಗಳು "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಇಂಗ್ಲೆಂಡ್ ರಾಷ್ಟ್ರಕ್ಕಾಗಿ ದುಡಿದ ನಾಯಕರು ತಮ್ಮ ದೊಡ್ಡ ದೇಶದ ಗೌರವವನ್ನು ಹೆಮ್ಮೆ ಯಿಂದ ಕಾಪಾಡಲು ಹೇಳಿದಂತಿರುವುದನ್ನು ಲೇಖಕರು ಸ್ವಾರಸ್ಯಪೂರ್ಣ ಅಭಿವ್ಯಕ್ತಪಡಿಸಿದ್ದಾರೆ.

**2. "ಹೊತ್ತು ! ಹೊತ್ತು ! ಹೊತ್ತೇ ಹಣ."**

**ಆಯ್ಕೆ:–** ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಲಂಡನ್ ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ತಿರುಗಾಡುತ್ತಾರೆ. ಅವಸರದಿಂದ ಓಡುತ್ತಾರೆ. ವಿದೇಶಿಯರು ಹಣಗಳಿಸಲು ಅವಸರ ಪಡುತ್ತಾರೆ. ಅವರಿಗೆ ಸಮಯವೇ ಹಣ. "ಹೊತ್ತು ! ಹೊತ್ತು ! ಹೊತ್ತೇ ಹಣ" (time! time! time is money) ಇದು ಅಕ್ಷರಶಃ ವಿಲಾಯಿತಿ(ವಿದೇಶ)ಯಲ್ಲಿ ನಿಜವಾಗಿದೆ ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ವಿದೇಶಗಳ ಜನರು ಹಣಗಳಿಸಲು ಅತಿ ಸಮಯವನ್ನು ನೀಡುತ್ತಾರೆ. ಸಮಯವೇ ಅವರಿಗೆ ಹಣ ಎಂಬ ಮಾತು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತವಾಗಿದೆ.

**3. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ! ಮಣ್ಣು ! ಮಣ್ಣು !"**

**ಆಯ್ಕೆ:–** ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಲೇಖಕರು ವೆಸ್ಟ್ ಮಿನ್ ಸ್ಟರ್ ಅಬೆ ಪ್ರಾರ್ಥನಾ ಮಂದಿರದ ಪೊಯೆಟ್ಸ್ ಕಾರ್ನರ್‌ನಲ್ಲಿದ್ದ ಕವಿಗಳ ಸಮಾಧಿಯನ್ನು ನೋಡುತ್ತಾ ಹೋಗುವಾಗ ನಮ್ಮ ದೇಶದಲ್ಲಿ ಸತ್ತವರೆಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ ಇಲ್ಲಿನ ಸಾಧಕರಿಗೆ ಒಂದೊಂದು ಕಲ್ಲನ್ನು

ಕೊಟ್ಟಿದ್ದಾರೆ. ಈ ಕಲ್ಲುಗಳ ಮೇಲೆ ಹಾಯ್ದಾಡುತ್ತಾ, ತುಳಿಯುತ್ತ ಹೋಗುವಾಗ ಇದು ತಪ್ಪು ಹೆಜ್ಜೆಯಲ್ಲವೇ ಎಂಬ ಹೆದರಿಕೆಯು ಅವರನ್ನು ಹಿಡಿದು ನಿಲ್ಲಿಸುತ್ತದೆ. ಕಡೆಗೆ ದಿಕ್ಕುತಪ್ಪಿದಂತಾಗಿ "ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!" ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ ಎಂಬ ಭಾವನೆ ಮೂಡಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಲೇಖಕರಿಗೆ ಇಂಗ್ಲೆಂಡ್ ಕವಿಗಳ ಮೇಲಿನ ಗೌರವ ಭಾವನೆಯಿಂದ ಅವರಿಗೆ ಕೊಟ್ಟಕಲ್ಲುಗಳನ್ನು ತುಳಿಯಬಾರದೆಂಬ ಭಾವನೆ ಇದ್ದರೂ ದಿಕ್ಕುತೋಚದಂತಾಗಿ ಎಲ್ಲರೂ ಕೊನೆಗೆ ಮಣ್ಣು ಸೇರಬೇಕಲ್ಲವೇ ಎಂಬ ಭಾವವನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

**4. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."**

**ಆಯ್ಕೆ:–** ಈ ವಾಕ್ಯವನ್ನು **'ವಿ.ಕೃ.ಗೋಕಾಕ್ '** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಲೇಖಕರು ತಮ್ಮ ಪ್ರವಾಸ ಕಥನದ ಕೊನೆಯಲ್ಲಿ ಈ ಪ್ರವಾಸದಿಂದ ನನ್ನ ಮನಸ್ಸು ಎಷ್ಟೊಂದು ವಿಕಾಸವನ್ನು ಹೊಂದಿದೆ. ನನ್ನ ದೃಷ್ಟಿಯು ಎಷ್ಟು ವಿಶಾಲವಾಗಿದೆ. ನನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ. ಇದನ್ನೆಲ್ಲ ನೆನೆಸಿಕೊಂಡಾಗ"ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" ಎಂದು ಬೇಕನ್ನನು ಹೇಳಿದ ಮಾತು ನೆನಪಾಗುತ್ತದೆ ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** "ದೇಶ ಸುತ್ತಿ ನೋಡು: ಕೋಶ ಓದಿ ನೋಡು" ಎಂಬ ಗಾದೆ ಮಾತಿನಂತೆ ಶಿಕ್ಷಣದ ವ್ಯಾಪಕತೆಗೆ ಪ್ರವಾಸವೂ ಕೂಡ ಒಂದು ಭಾಗವಾಗಿರುತ್ತದೆ ಎಂಬ ಮಹತ್ವವನ್ನು ಈ ವಾಕ್ಯ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಿಸುತ್ತದೆ.

**ಉ) ಇಲ್ಲಿ ಬಿಟ್ಟಿರುವ ಪದಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಲಂಡನ್ ಪಟ್ಟಣವೆಂದರೆ ಒಂದು **ಸ್ವತಂತ್ರ** ಜಗತ್ತು.
2. ವೂಲವರ್ಥ ಎಂಬುದು **ಸ್ಟೇಷನರಿ** ಅಂಗಡಿ.
3. ಮನೆ ಹಿಡಿದು ಇರುವ **ತರುಣನ** ಬುದ್ಧಿ ಮನೆಯ ಮಟ್ಟದ್ದೇ.
4. ಅಬೆಯಲ್ಲಿರುವ ಸಿಂಹಾಸನಕ್ಕೆ **ಸ್ಟೋನ್ ಆಫ್ ಸ್ಕೋನ್** ಎಂದು ಹೆಸರು.
5. ವೆಸ್ಟ್‌ಮಿನ್‌ಸ್ಟರ್ ಅಬೆ ಎಂಬುದು **ಪ್ರಾರ್ಥನಾ** ಮಂದಿರ.

**ಊ) ಈ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.**

ಒಮ್ಮೊಮ್ಮೆ, ಜಾಗವನ್ನು, ಅತ್ಯಾದರ, ವಾಚನಾಲಯ, ಸಂಗ್ರಹಾಲಯ, ಓಣಿಯಲ್ಲಿ.

| | | | |
|---|---|---|---|
| ಒಮ್ಮೆ | + ಒಮ್ಮೆ | = **ಒಮ್ಮೊಮ್ಮೆ** | – **ಲೋಪಸಂಧಿ** |
| ಜಾಗ | + ಅನ್ನು | = **ಜಾಗವನ್ನು** | – **ಆಗಮಸಂಧಿ** |
| ಅತಿ | + ಆದರ | = **ಅತ್ಯಾದರ** | – **ಯಣ್ ಸಂಧಿ** |
| ವಾಚನ | + ಆಲಯ | = **ವಾಚನಾಲಯ** | – **ಸವರ್ಣದೀರ್ಘಸಂಧಿ** |
| ಸಂಗ್ರಹ | + ಆಲಯ | = **ಸಂಗ್ರಹಾಲಯ** | – **ಸವರ್ಣದೀರ್ಘಸಂಧಿ** |
| ಓಣಿ | + ಅಲ್ಲಿ | = **ಓಣಿಯಲ್ಲಿ** | – **ಆಗಮಸಂಧಿ** |

**ಋ) ಈ ಪದಗಳ ಅರ್ಥ ಬರೆದು ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ.**

ದಂಗುಬಡಿ, ಮನಗಾಣು, ಘನತರ, ನಿಟ್ಟಿಸಿ ನೋಡು, ಮೂಲೆಗೊತ್ತು, ದಿಕ್ಕುತಪ್ಪು,

| | | |
|---|---|---|
| ದಂಗುಬಡಿ – ಆಶ್ಚರ್ಯಪಡು | : | ಚೇರಿಂಗ್ ಕ್ರಾಸ ಓಣಿಯಲ್ಲಿ ಇಂಡಿಯಾ ಆಫೀಸ್, ಆಫ್ರಿಕನ್ ಕಛೇರಿ, ಇನ್ನೊಂದು ವಸಾಹತಿನ ಕಚೇರಿ, ನೂರೆಂಟು ಬ್ಯಾಂಕ್‌ಗಳು ದೊಡ್ಡ ಕಂಪೆನಿಗಳ ಕಚೇರಿಗಳು, ಎಲ್ಲವೂ **ದಂಗುಬಡಿ**ಸುವಂತೆ ನೆರೆದಿವೆ. |
| ಮನಗಾಣು – ತಿಳಿದುಕೊಳ್ಳು | : | ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು **ಮನಗಾಣ**ಬಹುದು. |
| ದುರಸ್ತಿ– ಸರಿಪಡಿಸುವಿಕೆ | : | ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿರುವ 'ವೆಸ್ಟ್ ಮಿನ್‌ಸ್ಟರ್ ಅಬೆ'ಯ ಕೆಲವೊಂದು ಭಾಗಗಳ **ದುರಸ್ತಿ**ಯನ್ನು ಬಿಟ್ಟರೆ ಇಂದಿಗೂ ಅಚ್ಚಳಿಯದೆ ಉಳಿದಿದೆ. |
| ಘನತರ – ಶ್ರೇಷ್ಠವಾದ | : | ಸಂತ, ಸಾರ್ವಭೌಮರು ಮಲಗಿರುವರು; ಕವಿಪುಂಗವರು ಒರಗಿರುವರು. ಸತ್ತವರ ಸ್ಮಾರಕವೆಂದು ಇದಕ್ಕಿಂತ **ಘನತರ**ವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. |
| ನಿಟ್ಟಿಸಿ ನೋಡು – ದೃಷ್ಟಿಸಿನೋಡು | : | ಸಹಜವಾಗಿ ಮೇಲಕ್ಕೆ ಮೋರೆಯೆತ್ತಿ ನೋಡಲು, ಅಲ್ಲಿ ಅರ್ಲ್ ಆಫ್ ಚ್ಯಾಟ್ಹಾಂನು ನನ್ನ ಕಡೆ ನೋಡುತ್ತ ನಿಂತಿದ್ದನು. ಹಾಗೇ ಎದುರಿಗೆ **ನಿಟ್ಟಿಸಿ ನೋಡಿ**ದೆ ಗ್ಯಾಡ್‌ಸ್ಟನ್, ಮಾಲ್ಪ ಡಿಸ್‌ರೇಲಿ ಮೂರ್ತಿಗಳು ಕಣ್ಣಿಗೆ ಬಿದ್ದವು. |

| | | |
|---|---|---|
| ಮೂಲೆಗೊತ್ತು – ಅಲಕ್ಷಿಸು | : | ವರ್ಡ್ಸ್‌ವರ್ತ್‌ನು ಅಲ್ಲಿ ತಪಶ್ಚರ್ಯಕ್ಕೆ ಕುಳಿತಿದ್ದನು. ವರ್ಡ್ಸ್‌ವರ್ತ್‌ನಂಥವರನ್ನೂ ಅವರು **ಮೂಲೆಗೊತ್ತಿ** ಬಿಟ್ಟಿದ್ದಾರೆ. |
| ದಿಕ್ಕುತಪ್ಪು– ದಾರಿ ಕಾಣುದಂತಾಗು | : | ತಪ್ಪು ಹೆಜ್ಜೆ ಹಾಕಬಹುದೆಂಬ ಹೆದರಿಕೆಯು ಹಿಡಿದು ನಿಲ್ಲಿಸುತ್ತದೆ. ಕಡೆಗೆ **ದಿಕ್ಕುತಪ್ಪಿ**ದಂತಾಗಿ ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೇ ಮಣ್ಣು ಮಣ್ಣು ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ. |

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಕನ್ನಡ ಸಂಧಿಗಳನ್ನು ಹೆಸರಿಸಿ, ಎರಡೆರಡು ಉದಾಹರಣೆಗಳನ್ನು ಬರೆಯಿರಿ.**

**ಕನ್ನಡ ಸಂಧಿಗಳು –** (1) ಲೋಪಸಂಧಿ (2) ಆಗಮಸಂಧಿ (3) ಆದೇಶಸಂಧಿ

1. **ಲೋಪಸಂಧಿ** = ಊರೂರು, ಬಲ್ಲೆನೆಂದು, ಮಾತಂತು, ಸಂಪನ್ನರಾದ.

2. **ಆಗಮಸಂಧಿ** = ಕೈಯನ್ನು, ಮಳೆಯಿಂದ, ಶಾಲೆಯಲ್ಲಿ, ಮರವನ್ನು, ಮಗುವಿಗೆ.

3. **ಆದೇಶ ಸಂಧಿ** = ಮಳೆಗಾಲ, ಮೈದೋರು, ಬೆಂಬತ್ತು, ಕಡುವೆಳ್ಪು, ಮೆಲ್ವಾತು.

**2. ಸಂಸ್ಕೃತ ಸಂಧಿಗಳ ಹೆಸರುಗಳನ್ನು ಸ್ವರ ಮತ್ತು ವ್ಯಂಜನ ಸಂಧಿಗಳಾಗಿ ವಿಂಗಡಿಸಿ ಬರೆಯಿರಿ.**

| | |
|---|---|
| **ಸಂಸ್ಕೃತ ಸ್ವರ ಸಂಧಿಗಳು** | (1) ಸವರ್ಣದೀರ್ಘ ಸಂಧಿ (2) ಗುಣಸಂಧಿ (3) ವೃದ್ಧಿ ಸಂಧಿ (4) ಯಣ್ ಸಂಧಿ |
| **ಸಂಸ್ಕೃತ ವ್ಯಂಜನ ಸಂಧಿಗಳು** | (1) ಜಶ್ತ್ವಸಂಧಿ (2) ಶ್ಚುತ್ವಸಂಧಿ (3) ಅನುನಾಸಿಕಸಂಧಿ |

**3. ಕೊಟ್ಟಿರುವ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.**

ಸುರಾಸುರ, ಬಲ್ಲೆನೆಂದು, ಸೂರ್ಯೋದಯ, ಮಳೆಗಾಲ, ಅಷ್ಟೈಶ್ವರ್ಯ, ವೇದಿಯಲ್ಲಿ.

| | | | | | | |
|---|---|---|---|---|---|---|
| ಸುರ | + ಅಸುರ | = | **ಸುರಾಸುರ** | – | **ಸವರ್ಣದೀರ್ಘ ಸಂಧಿ** |
| ಬಲ್ಲೆನು | + ಎಂದು | = | **ಬಲ್ಲೆನೆಂದು** | – | **ಲೋಪಸಂಧಿ** |
| ಸೂರ್ಯ | + ಉದಯ | = | **ಸೂರ್ಯೋದಯ** | – | **ಗುಣಸಂಧಿ** |
| ಮಳೆ | + ಕಾಲ | = | **ಮಳೆಗಾಲ** | – | **ಆದೇಶ ಸಂಧಿ** |
| ಅಷ್ಟ | + ಐಶ್ವರ್ಯ | = | **ಅಷ್ಟೈಶ್ವರ್ಯ** | – | **ವೃದ್ಧಿ ಸಂಧಿ** |
| ವೇದಿ | + ಅಲ್ಲಿ | = | **ವೇದಿಯಲ್ಲಿ** | – | **ಆಗಮಸಂಧಿ** |

**ಆ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಯಾದ ನಾಲ್ಕನೆಯ ಪದ ಬರೆಯಿರಿ.**

1. ನಮೋ ನಮೋ : ದ್ವಿರುಕ್ತಿ : : ಧೀರ ಶೂರ : **ಜೋಡುನುಡಿ**
2. ಲೋಪ ಸಂಧಿ : ಸ್ವರ ಸಂಧಿ : : ಆದೇಶ ಸಂಧಿ : **ವ್ಯಂಜನ ಸಂಧಿ**
3. ಕಟ್ಟಕಡೆಗೆ : ಕಡೆಗೆ ಕಡೆಗೆ : : ಮೊತ್ತಮೊದಲು : **ಮೊದಲು ಮೊದಲು**
4. ಶರಚ್ಚಂದ್ರ : ಶ್ಚುತ್ವ ಸಂಧಿ : : ದಿಗಂತ : **ಜಶ್ತ್ವಸಂಧಿ**